(ಸಾಕ್ಷಿಯನ್ನು ದಿನಾಂಕಃ 26.11.2024 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು)

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 7 ಮತ್ತು 8 ರವರ ಪರ ವಕೀಲರುಃ ಶ್ರೀ ಸಿ ಸಿ ಎಸ್ ರವರಿಂದ**

ನಮ್ಮ ತಂದೆಯ ಜೊತೆ ಮೂರು ಜನ ಅಣ್ಣತಮಂದಿರು ಜನಿಸಿರುತ್ತಾರೆ. ಅವರುಗಳ ಹೆಸರು, ದೊಡ್ಡಬೊಮ್ಮಯ್ಯ, ಚಿಕ್ಕಬೊಮ್ಮಯ್ಯ ಮತ್ತು ನಿಂಗಯ್ಯ. ದೊಡ್ಡಬೊಮ್ಮಯ್ಯ, ಚಿಕ್ಕಬೊಮ್ಮಯ್ಯ ಮತ್ತು ನಿಂಗಯ್ಯ ರವರು ಕರಿಯಯ್ಯ ಉಃ ಬೊಮ್ಮಯ್ಯ ರವರ ಮಕ್ಕಳು ಎಂದರೆ ಸರಿ. ನಿಮ್ಮ ತಾತ ಕರಿಯಯ್ಯ ಉಃ ಬೊಮ್ಮಯ್ಯ ಎಂಬುವವರಿಗೆ ಎಳವಯ್ಯ ಎಂಬ ತಮ್ಮ ಇದ್ದಾರೆಂದರೆ ಸರಿ. ಕರಿಯಯ್ಯ ಉಃ ಬೊಮ್ಮಯ್ಯ ಮತ್ತು ಎಳವಯ್ಯರವರು ನಿಮ್ಮ ಕುಟುಂಬದ ಮೂಲ ಪುರುಷ ಬೊಮ್ಮಯ್ಯ ಮತ್ತು ಬೋರಮ್ಮ ರವರ ಮಕ್ಕಳು ಎಂದರೆ ಸರಿ. ನಿಮ್ಮ ಚಿಕ್ಕತಾತ ಎಳವಯ್ಯ ಮತ್ತು ಮಾದಮ್ಮ ರವರಿಗೆ ಮಕ್ಕಳಿಲ್ಲ ಎಂದರೆ ಸರಿ. ನಿಮ್ಮ ಚಿಕ್ಕ ತಾತ ಎಳವಯ್ಯ ಮತ್ತು ಮಾದಮ್ಮ ರವರು ತಮಗೆ ಮಕ್ಕಳು ಇಲ್ಲದ ಕಾರಣ ನಿಮ್ಮ ದೊಡ್ಡಪ್ಪ ಚಿಕ್ಕಬೊಮ್ಮಯ್ಯ ರವರನ್ನು ಸಾಕಿಕೊಂಡಿದ್ದರು ಎಂದರೆ ಸರಿಯಲ್ಲ. ಸದರೀ ಚಿಕ್ಕಬೊಮ್ಮಯ್ಯ ರವರು ತಮ್ಮ ಸಾಕುತಂದೆಯಾದ ಎಳವಯ್ಯ ಮತ್ತು ಮಾದಮ್ಮ ರವರ ಯೋಗಕ್ಷೇಮವನ್ನು ನೋಡಿಕೊಂಡು ಅವರ ಅಂತ್ಯಸಂಸ್ಕಾರವನ್ನೂ ಕೂಡ ಮಾಡಿರುತ್ತಾರೆಂದರೆ ಸರಿಯಲ್ಲ. ದಾವಾ ಆಸ್ತಿ ನಂಬರ್ 1 ಸ.ನಂ. 87 ವಿಸ್ತೀರ್ಣ 3 ಎಕರೆ 16 ಗುಂಟೆ ತೋಟಿ ಇನಾಮ್ತಿ ಜಮೀನು ಎಂದರೆ ಸರಿ. ಸದರೀ ಜಮೀನು, ಹೆಚ್ ಓ ಎ 203/1970-71 ರಂತೆ ಮಾದಮ್ಮ ಕೋಂ ಎಳವಯ್ಯ, ಚಿಕ್ಕಬೊಮ್ಮಯ್ಯ, ದೊಡ್ಡಬೊಮ್ಮಯ್ಯ, ತಿಮ್ಮಯ್ಯ ಬಿನ್ ತಿಮ್ಮಯ್ಯ, ವೆಂಕಟಯ್ಯ ಬಿನ್ ಗೋವಿಂದಯ್ಯ ರವರಿಗೆ ಜಂಟಿಯಾಗಿ ಪುನರ್ ಮಂಜೂರಾತಿಯಾಗಿದೆಯೆಂದರೆ ಸರಿ. ಸದರೀ ಮಂಜೂರಾತಿಯ ಪ್ರಕಾರ ಮಾದಮ್ಮ ಕೋಂ ಎಳವಯ್ಯ ರವರಿಗೆ 1 ಎಕರೆ 5 ಗುಂಟೆ, ಕರಿಯಯ್ಯ ನ ಮಕ್ಕಳಾದ ದೊಡ್ಡಬೊಮ್ಮಯ್ಯ ಮತ್ತು ಚಿಕ್ಕಬೊಮ್ಮಯ್ಯ ರವರಿಗೆ 1 ಎಕರೆ 5 ಗುಂಟೆ ಮತ್ತು ತಿಮ್ಮಯ್ಯ ಬಿನ್ ತಿಮ್ಮಯ್ಯ ರವರಿಗೆ ಮತ್ತು ವೆಂಕಟಯ್ಯ ಬಿನ್ ಗೋವಿಂದಯ್ಯ ರವರಿಗೆ 1 ಎಕರೆ 5 ಗುಂಟೆಯಂತೆ ಹಕ್ಕು ಅಧಿಕಾರ ಮತ್ತು ಸ್ವಾಧೀನಾನುಭವವನ್ನು ಹೊಂದಿದ್ದಾರೆಂದರೆ ಸರಿ. ಸದರೀ ಮಾದಮ್ಮ ಕೋಂ ಎಳವಯ್ಯ ರವರು ಮರಣ ಹೊಂದಿದ ನಂತರ ಅವರ ಸ್ವಯಾರ್ಜಿತ ಆಸ್ತಿಯಾದ ಸ.ನಂ. 87 ರಲ್ಲಿನ 1 ಎಕರೆ 5 ಗುಂಟೆ ಮತ್ತು ದಾವಾ ಆಸ್ತಿ ನಂ 2 ರ ಸ.ನಂ.29 ರ ವಿಸ್ತೀರ್ಣ 39 ಗುಂಟೆ ಜಮೀನನ್ನು ಅವರ ಸಾಕುಮಗನಾದ ಚಿಕ್ಕಬೊಮ್ಮಯ್ಯ ರವರು ಎಂ ಆರ್ ನಂ 20/1995-96 ರಂತೆ ತಮ್ಮ ಹೆಸರಿಗೆ ಖಾತೆಯನ್ನು ಮಾಡಿಕೊಂಡು ಅದರ ಸ್ವಾಧೀನ ಮತ್ತು ಅನುಭವದಲ್ಲಿದ್ದಾರೆಂದರೆ ಸರಿ.

ನಂತರ ಚಿಕ್ಕಬೊಮ್ಮಯ್ಯ ರವರ ಮರಣಾನಂತರ ಅವರ ಹೆಂಡತಿಯಾದ ಮರಿಯಮ್ಮ ರವರು ದಾವಾ ಆಸ್ತಿಗಳ ಖಾತೆಯನ್ನು ತನ್ನ ಹೆಸರಿಗೆ ವರ್ಗಾವಣೆ ಮಾಡಿಕೊಂಡು, ಅದರ ಸ್ವಾಧೀನ ಮತ್ತು ಅನುಭವದಲ್ಲಿದ್ದಾರೆಂದರೆ ಸರಿ. ದಾವಾ ಆಸ್ತಿ ನಂ 1 ರ ಸ. ನಂ. 87 ರ ವಿಸ್ತೀರ್ಣ 1 ಎಕರೆ 5 ಗುಂಟೆಯ ಪೈಕಿ 30 ಗುಂಟೆ ಜಮೀನನ್ನು ಖಾತೆದಾರರಾದ ಮರಿಯಮ್ಮ ಮತ್ತು ಪ್ರತಿವಾದಿ 7 ರಿಂದ 9 ರವರು ದಿನಾಂಕಃ 05.08.2005 ರಂದು ತಮ್ಮ ಕಾನೂನುಬದ್ಧ ಅವಶ್ಯಕತೆಗಳಿಗಾಗಿ ಪ್ರತಿವಾದಿ 11 ರವರಿಗೆ ಮಾರಾಟ ಮಾಡಿದ್ದಾರೆಂದರೆ ಸಾಕ್ಷಿ ಅಕ್ರಮವಾಗಿ ಮಾರಾಟ ಮಾಡಿದ್ದಾರೆಂದು ನುಡಿಯುತ್ತಾರೆ.

ನೀವು ಮತ್ತು ಪ್ರತಿವಾದಿ 7 ರಿಂದ 9 ರವರು ಈ ದಾವೆಯನ್ನು ಸಲ್ಲಿಸುವ ಸಂದರ್ಭದಲ್ಲಿ ನೀವು ಒಟ್ಟು ಕುಟುಂಬದಲ್ಲಿ ಇರಲಿಲ್ಲ ಎಂದರೆ ಸರಿ. 1970–71 ನೇ ಸಾಲಿನಲ್ಲಿ ನಿಮ್ಮ ತಾತ ಕರಿಯಯ್ಯ ಉಃ ಬೊಮ್ಮಯ್ಯ ಮತ್ತು ಎಳವಯ್ಯರವರು ತಮ್ಮ ಒಟ್ಟು ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ. ದಾವಾ ಆಸ್ತಿ ನಂ.1 ಮಾದಮ್ಮ ಕೋಂ ಎಳವಯ್ಯರವರ ಸ್ವಯಾರ್ಜಿತ ಸ್ವತ್ತಾಗಿದ್ದು, ಅದರಲ್ಲಿ ನಿಮಗೆ ಯಾವುದೇ ರೀತಿಯ ಹಕ್ಕು ಮತ್ತು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಧ್ಯವಾದರೆ ಸದರೀ ಆಸ್ತಿಗಳನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸ ಇ ಓ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ ಮದ್ದೂರು.